ಪರಿಶಿಷ್ಟ ಜಾತಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಕಟ್ಟಡ ಬಗ್ಗೆ

49 (83) ಶ್ರೀ. ಸುರೇಶ್‌ಗೌಡ (ನಾಗಮಂಗಲ)

ಶ್ರೀ. ಡಿ. ಸುಧಾಕರ್(ಸಮಾಜ ಕಲ್ಯಾಣ ಸಚಿವರು)

ಅ) ಮದ್ದೂರು ತಾಲ್ಲೂಕು ಕೊಪ್ಪ ಗ್ರಾಮದ ಪರಿಶಿಷ್ಟ ಜಾತಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕೆ ಯಾವ ವರ್ಷದಲ್ಲಿ ಮಂಜೂರಾತಿ ನೀಡಲಾಗಿದೆ; ಹಾಗಿದ್ದಲ್ಲಿ, ಹಣ ಬಿಡುಗಡೆ ಮಾಡಲಾಗಿದೆಯೇ; (ವಿವರ ಒದಗಿಸುವುದು);

ಮದ್ದೂರು ತಾಲ್ಲೂಕು ಕೊಪ್ಪ ಗ್ರಾಮದ ಜಾತಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕೆ 2003-04ನೇ ಸಾಲಿನಲ್ಲಿ ಮಂಜೂರಾತಿ ನೀಡಲಾಗಿದ್ದು ರೂ.24.50 ಲಕ್ಷಗಳ ಮೊತ್ತವನ್ನು ಕರ್ನಾಟಕ ಭೂಸೇನಾ ನಿಗಮಕ್ಕೆ ಬಿಡುಗಡೆ ಮಾಡಲಾಗಿದೆ.

ಆ) ಹಾಗಿಲ್ಲದಿದ್ದಲ್ಲಿ, ಈವರೆವಿಗೂ ಕಟ್ಟಡ ಕಾಮಗಾರಿ ಪ್ರಾರಂಭವಾಗದಿರಲು ಕಾರಣಗಳೇನು;

ಹಾಲಿ ಇರುವ ನಿವೇಶನಕ್ಕೆ ಸೂಕ್ತ ರಸ್ತೆ ಸಂಪರ್ಕವಿರುವುದಿಲ್ಲ. ನಿವೇಶನದ ಪಕ್ಕದ ಜಮೀನಿನ ಮಾಲೀಕರಿಂದ ತಕರಾರು ಇರುತ್ತದೆ. ಅದಲ್ಲದೆ ನಿವೇಶನದ ಪಕ್ಕ ಕಾಲುವೆ ಇದ್ದು ಕಾಲುವೆಗೆ ತಡೆಗೋಡೆ ಇಲ್ಲದ ಕಾರಣ ಪಾಯವನ್ನು ಎತ್ತರಿಸಿ ಕಾಲಂ ಹಾಕಿ ಕಟ್ಟಡ ನಿರ್ಮಿಸಬೇಕಾಗುತ್ತದೆ. ಇದಕ್ಕೆ ರೂ.38.75 ಲಕ್ಷಗಳನ್ನು ಹೆಚ್ಚುವರಿ ವೆಚ್ಚ ಉಂಟಾಗಲಿದೆ. ಇದರಿಂದಾಗಿ ಕಟ್ಟಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಲ್ಲಿ ವಿಳಂಬ ಉಂಟಾಗುತ್ತಿದೆ.

ಇ ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಈ ಮೇಲೆ (ಆ) ರಲ್ಲಿ ವಿವರಿಸಿರುವುದರ ಮೇರೆಗೆ ಕಟ್ಟಡದ ಪರಿಷ್ಕೃತ ಅಂದಾಜುಗಳಿಗೆ ಸಂಬಂಧಿಸಿದ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಸಂಖ್ಯೆ:ಸಕಇ 77 ಪಕವಿ 2009

ಶ್ರೀ ಸುರೇಶ್‌ಗೌಡ: ನನ್ನ ಕ್ಷೇತ್ರದ ಕೊಪ್ಪ ಗ್ರಾಮದ ಪರಿಮಿತಿಯಲ್ಲಿ ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕೆ 2005-06ನೇ ಸಾಲಿನಲ್ಲಿ ಸುಮಾರು 24 ಲಕ್ಷ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿದ್ದಾರೆ. ಈ ಹಣವನ್ನು ಸಹ ಕರ್ನಾಟಕ ಭೂ ಸೇನಾ ನಿಗಮದವರಿಗೆ ನೀಡಲಾಗಿದೆ. ತದನಂತರ, ಅವರು ಪಕ್ಕದಲ್ಲಿ ಯಾವುದೋ ಒಂದು ಕಾಲುವೆ ಇದೆ ಎಂದು, 24, ಲಕ್ಷ ರೂಪಾಯಿಗಳು ಸಾಕಾಗುವುದಿಲ್ಲವೆಂದು, 46.5 ಲಕ್ಷ ರೂಪಾಯಿಗಳಿಗೆ ಒಂದು ಅಂದಾಜು ಸಿದ್ಧಪಡಿಸಿ, ಸರ್ಕಾರಕ್ಕೆ ಕಳುಹಿಸಿದ್ದಾರೆ. ಅದಕ್ಕೆ 58.5 ಲಕ್ಷ ರೂಪಾಯಿಗಳಿಗೆ ಒಂದು ಅಂದಾಜು ಸಿದ್ಧಪಡಿಸಿ, ಸರ್ಕಾರಕ್ಕೆ ಕಳುಹಿಸಿದ್ದಾರೆ. ಅದಕ್ಕೆ 58.5 ಲಕ್ಷ ರೂಪಾಯಿಗಳಿಗೆ ಇನ್ನೊಂದು ಅಂದಾಜು ಪಟ್ಟಿಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಸುಮಾರು ಮೂರು ವರ್ಷಗಳ ಹಿಂದೆ ಭೂ

ಸೇನಾ ನಿಗಮದವರು ಈ ಕೆಲಸಕ್ಕಾಗಿ 24 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಮೂರು ವರ್ಷಕ್ಕೆ ಬಡ್ಡಿಯೇ ಸುಮಾರು 5–8 ಲಕ್ಷ ರೂಪಾಯಿಗಳಾಗುತ್ತಿದೆ. ಅಂದಿನ ಶಾಸಕರ ಒತ್ತಾಯಕ್ಕೆ ಇಲ್ಲಿ ಪಾಯ ಮಾತ್ರ ತೆಗೆದಿದ್ದಾರೆ. ಆದರೆ, ಉತ್ತರದಲ್ಲಿ, ಅಲ್ಲಿ ರಸ್ತೆ ಇಲ್ಲ, ತೊಂದರೆ ಇದೆ. ಸೈಟ್ ಇದೆ, ಕೆಲಸವನ್ನು ಪ್ರಾರಂಭಿಸಿ, ಪಾಯ ತೆಗೆದಿದ್ದಾರೆಂದು ಹೇಳಿದ್ದಾರೆ. ಆದರೆ, ಅಲ್ಲಿ ಇದುವರೆಗೆ ಸಹ ಕೆಲಸವನ್ನು ಪ್ರಾರಂಭ ಮಾಡಿಲ್ಲ. ಅದರ ಜೊತೆಗೆ, ಭೂ ಸೇನಾ ನಿಗಮದವರು ಮಾಡುವ ಯಾವುದೇ ಕಾಮಗಾರಿ ನಾವು ನಮ್ಮ ಕ್ಷೇತ್ರದಲ್ಲಿ ಗಮನಿಸಿದಂಥ ಸಂದರ್ಭದಲ್ಲಿ ಯಾವುದೂ ಗುಣಮಟ್ಟದ ಕೆಲಸವಾಗಿಲ್ಲ. ದಯಮಾಡಿ, ಅದನ್ನೇನಾದರೂ ಸಚಿವರು ಮನಸ್ಸು ಮಾಡಿ, ಅದಕ್ಕೆ ಬೇರೆ Agency ಯನ್ನು ಫಿಕ್ಸ್ ಮಾಡಿ PWD ಅಥವಾ ಬೇರೆಯವರಿಗೆ ಕೊಟ್ಟು ಆದಷ್ಟು ಬೇಗ ಕೆಲಸ ಮಾಡಿಸಬೇಕು. ಏಕೆಂದರೆ, ಅಲ್ಲಿರುವ ಎಲ್ಲಾ ಹಾಸ್ಟೆಲ್‌ಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವುದರಿಂದ, ಸರ್ಕಾರದಿಂದ ಹಣ ಹೋಗುತ್ತಿದೆ. ಅದನ್ನು ತಪ್ಪಿಸಲಿಕ್ಕೆ ಹಣ ಸೋರಿಕೆ ತಡೆಗಟ್ಟುವುದಕ್ಕೋಸ್ಕರ ತಕ್ಷಣ ಕಾಮಗಾರಿಗಳನ್ನು ಕೈಗೊಳ್ಳುತ್ತಾರೆಯೇ ಎಂದು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಡಿ. ಸುಧಾಕರ: ಹಾಲಿ ಇರುವ ನಿವೇಶನದ ಪಕ್ಕದಲ್ಲಿ ಕಾಲುವೆ ಇದ್ದು, ಅದಕ್ಕೆ ಕಾಲಂ ಹಾಕಿ ಕಟ್ಟಬೇಕೆಂದು ಅವರು ಹೊಸದಾಗಿ ಮಂಜೂರಾತಿಯನ್ನು ಕೇಳಿದ್ದಾರೆ. ಈಗಾಗಲೇ ನಾವು ಆ ಮಂಜೂರಾತಿಯನ್ನು ಪರಿಶೀಲನೆ ಮಾಡಿ ತಕ್ಷಣ ಆ ಕಾಮಗಾರಿಯನ್ನು ಮಾಡಲಿಕ್ಕೆ ನಾನು ಇವತ್ತು ಸೂಚನೆ ಕೊಡುತ್ತೇನೆ. ಜೊತೆಗೆ, Land Army ಗೆ ಏನು ಕೊಟ್ಟಿದ್ದೇವೆ, ಅವರು ಶೀಘ್ರವಾಗಿ ಕೆಲಸ ಮಾಡಲಿಕ್ಕೆ ಸಹ directionಅನ್ನು ಕೊಡುತ್ತೇನೆ ಮತ್ತು ಕಾಮಗಾರಿಯನ್ನು 8–10 ತಿಂಗಳಲ್ಲಿ ಮುಗಿಸಿಕೊಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಸುರೇಶ್‌ಗೌಡ: ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಯಾವಾಗ ಮುಗಿಸಿಕೊಡುತ್ತೀರಿ ಎಂಬುದನ್ನು ತಾವು ಹೇಳಬೇಕು.

ಶ್ರೀ ಡಿ ಸುಧಾಕರ: ಆ ಕಾಮಗಾರಿಯನ್ನು ಪೂರ್ಣ ಮಾಡಿಸಿಕೊಡುತ್ತೇನೆ.

ಖಾಲಿ ಹುದ್ದೆಗಳ ಭರ್ತಿ ಮಾಡುವುದರ ಬಗ್ಗೆ.

50 (276)

ಶ್ರೀ. ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ)

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು)

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ 2000 ಕ್ಕೂ ಹೆಚ್ಚು 3 ಮತ್ತು 4ನೇ ದರ್ಜೆ ನೌಕರರ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು